ಅಧ್ಯಕ್ಷರು : ತಾವು ಸಹಕರಿಸಬೇಕು.

ಶ್ರೀ ಹೆಚ್. ಎಸ್. ಶಂಕರ್‌ಲಿಂಗೇಗೌಡ : ಸದನ ಸಮಿತಿ ಮಾಡಿದ ಶಿಫಾರಸ್ಸಿಗೆ ತಾವು ಕಿಂಚಿತ್ತು ಆದರೂ ಬೆಲೆ ಕೊಡುವುದಿಲ್ಲವೇ? ಪಕ್ಕದಲ್ಲೇ ಮಹಾರಾಣಿಸ್ ಕಾಲೇಜು ಇದೆ.

ಅಧ್ಯಕ್ಷರು : ತಾವು ದಯಮಾಡಿ ಆಮೇಲೆ ನನ್ನ ಆಫೀಸಿಗೆ ಬನ್ನಿ, ಅವರನ್ನು ಕರೆಯಿಸುತ್ತೇನೆ, ನೀವು ಏನು ಕೇಳಿರುವಿರಿ, ಅದಕ್ಕೆ ಅವರು ತದ್ ವಿರುದ್ಧವಾಗಿ ಉತ್ತರ ಕೊಟ್ಟಿದ್ದಾರೆ, ಬೇರೆ ಯಾವ ರೂಪದಲ್ಲಿ ಅದನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕು ಅದರಂತೆ ನಾನು ಅವಕಾಶ ಮಾಡಿಕೊಡುತ್ತೇನೆ.

ಎ) ಮಂಗಳೂರಿನಲ್ಲಿ ವಿದ್ಯುತ್ ಕಡಿತದ ಬಗ್ಗೆ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಅಧ್ಯಕ್ಷರೆ, ಕೆ ಇ ಬಿ ಲೋಡ್ ಡಿಸ್‌ಪ್ಯಾಚ್ ಸೆಕ್ಷನ್‌ನ ಅಧಿಕಾರಿಗಳು ಒಂದು ತಾರತಮ್ಯ ನೀತಿಯನ್ನು ಅನುಸರಿಸುತ್ತಾ ಇದ್ದಾರೆ. ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಅಥವಾ ರಾಜ್ಯದ ಪ್ರಮುಖ ನಗರಗಳಲ್ಲಿ ಇಲ್ಲದಂತಹ ರಾತ್ರಿ ವೇಳೆಯ ವಿದ್ಯುತ್ ಕಡಿತ ಮಂಗಳೂರಿನಲ್ಲಿ ಮಾತ್ರ ಸತತವಾಗಿ ಮಾಡುತ್ತಿದ್ದಾರೆ. ಕಳೆದ ಕೆಲವು ದಿವಸಗಳಿಂದ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಐದು ಗಂಟೆಯವರೆಗೆ ಸತತವಾಗಿ ವಿದ್ಯುತ್ ಕಡಿತವಾಗುತ್ತಿದೆ. 15ಮೆ.ವ್ಯಾ.ಗಿಂತ ಹೆಚ್ಚಿನ ವಿದ್ಯುತ್ ಕಡಿತ ಮಾಡಬೇಕೆಂಬ ಆದೇಶವನ್ನು ಸಹ ಹೊರಡಿಸಿದ್ದಾರೆ. ಆದ್ದರಿಂದ ಈ ರೀತಿಯಾದಂತಹ ತಾರತಮ್ಯವನ್ನು ಮಾಡುವುದು ಸರಿಯಲ್ಲವೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ಖಾತೆ ರಾಜ್ಯ ಸಚಿವರು) :- ಅಧ್ಯಕ್ಷರೇ, ಲೋಕಲ್‌ನಲ್ಲಿ ಸ್ವಲ್ಪ ಪ್ರಾಬ್ಲಂ ಇರುವುದರಿಂದ ಹಾಗಾಗಿದೆ. ಇನ್ನು ಒಂದೆರಡು ದಿವಸದಲ್ಲಿ ಇಲಾಖೆಯಿಂದ ಅದನ್ನು ನಿವಾರಿಸಿಕೊಡುತ್ತೇವೆ.

ಐ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಟೌನ್ ಪಂಚಾಯತಿಯನ್ನು ರದ್ದುಗೊಳಿಸುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಟೌನ್ ಪಂಚಾಯಿತಿ ರದ್ದುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಶಿಫಾರಸ್ ಮಾಡಿದ್ದರೂ ಸಹ ಇಲ್ಲಿಯವರೆಗೂ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಳ್ಳದಿರುವ ಬಗ್ಗೆ ಸರ್ಕಾರದ ಗಮನಕ್ಕೆ ತರುವಂಥದೇನೆಂದರೆ ಬಹಿರಂಗವಾಗಿ ನಿವೇಶನಗಳನ್ನು ಹರಾಜು ಮಾಡಿರುವ ಸಂದರ್ಭದಲ್ಲಿ ಮುಖ್ಯ ಅಧಿಕಾರಿಗಳ ನಾದಿನಿಯ ಹೆಸರಿನಲ್ಲಿ ಅನಧಿಕೃತವಾಗಿ ತೆಗೆದುಕೊಂಡಿರುವ ನಿದರ್ಶನ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಬಹಿರಂಗ ಮಳಿಗೆ ಹರಾಜಿನ ವಿಚಾರದಲ್ಲಿ ಅವ್ಯವಹಾರ ನಡಿದಿದೆ ಎಂಬ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಿರುತ್ತಾರೆ. ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವುದರಲ್ಲಿ ಈ ಪಟ್ಟಣ ಪಂಚಾಯಿತಿ ವಿಫಲವಾಗಿದೆ ಎಂಬ ಬಗ್ಗೆ ಸಹ ಸರ್ಕಾರಕ್ಕೆ ವರದಿ ಸಲ್ಲಿಸಿಯಾಗಿದೆ. ಜಿಲ್ಲಾಧಿಕಾರಿಗಳು ನೇರವಾಗಿ ನಿಯಮ 316ರ ಪ್ರಕಾರ ಈ ಪಟ್ಟಣ ಪಂಚಾಯಿತಿಯನ್ನು ರದ್ದು ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಇದಾಗಿ 6 ತಿಂಗಳಾದರೂ ಇಲ್ಲಿಯವರೆಗೆ ಯಾವುದೇ ತರಹದ ಉತ್ತರ ಸಾರ್ವಜನಿಕರಿಗೆ ಸಿಕ್ಕದೇ ಇರುವ ಕಾರಣ ಸರ್ಕಾರ ನಿಯಮ 316ರ ಅಡಿ ಪಟ್ಟಣ ಪಂಚಾಯಿತಿಯನ್ನು ರದ್ದುಗೊಳಿಸುವಂತೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.